Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

ರಾಷ್ಟ್ರೀಯ ವಾರ್ತಾಪತ್ರಿಕೆ
(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 152] ಗುರುವಾರ 6—5—48 [ಬಿಡಿಪ್ರತಿ 3 ಪೈ

ಇನ್ನೂ ಸಂಶಯವೇ?

[.... ರಂಗ ನಿರ್ಮಾಣ ನೂಡಿ —

ರಜಕ್ಕರನ್ನು ನಿಶೇಧಿಸಿ, ರಜ್ವಿಯನ್ನು ಬಂಧಿಸಿ, ರವಾನೆಂದರಿಗೆ ಅಧಿಕಾರವನ್ನು ವಯಿಸುವವರೆಗೂ ನೈಜಾಮರನ್ನು ನಂ ಬಲಾಗದು. ಯುದ್ಧವೇ, ಸೇರುವಿಕೆಯೆ, ವಿನಯಪೂರ್ವಕವಾಗಿ ಜವಹರಲಾಲರು ಹೈದರಾಬಾದು ನೈಖಾಮರನ್ನು ಎಚ್ಚರಿಸಿರುವರು.

ಈ ಹೆದರಿಕೆಗಿಳಿಗೆ ಭಯಪಡುವುದಿಲ್ಲ ಎಂದು ರಜ್ವೀ ಹೇಳಿದ್ದಾನೆ

ಹೀಗೆಯೇ ನಡೆದುಕೊಳ್ಳುತ್ತಾ ಬಂದಲ್ಲಿ ರಜ್ವಿ ಮತ್ತು ಅವನ ಅನುಯಾಯಿ ಎಂಬ ವಿಷಯವನ್ನು ಮರೆಯದೆ ತಮ್ಮ ಗುಣಗಳನ್ನೂ ಚರ್ಯೆಗಳನ್ನೂ ಬದಲಾಯಿಸಿಕೊಂಡಲ್ಲಿ ತನುಗೂ ಸುಖ, ದೇಶಕ್ಕೂ ಸುಖ, ಹನಗೂ ಪ್ರಪಂಚಕ್ಕೂ ಸುಖ.

ಕೃತ್ರಿಮ ಚಂದ್ರ

ಇಂಗ್ಲೆಂಡಿನಲ್ಲಿ ಪ್ರತಿವರುಷ ರೈಲೆ ನಿಲ್ದಾಣಗಳಲ್ಲ ಲಕ್ಷಾವಧಿ ಪೌಂಡು ಬೆಲೆ[illegible] ವಸ್ತುಗಳು ಕೃಷ್ಣಪಕ್ಷದ ರಾತೆ[illegible] ಕಳವಾಗುತ್ತಿರುವವು; ಆದ[illegible]ದಕ್ಕಾಗಿ ಪಾರಜದ ಹೊ[illegible]ನ್ನು 50 ಘೂಟು ಎತ್ತರದ [illegible]ಹಚ್ಚಿ ಪೌರ್ಣಮಿಯು[illegible]ನ್ನು ಕೊಡುವ ಯೊ[illegible]ಡಯಿಂದು ತಿಳಿಯ

ಮೈಸೂರು— ಅಡ್ಜರ್ನ್ ನೂಡಲ್ಪಟ್ಟ ಪೌರಸಭಾಸಾಧಾರಣ ಎಾಟಂಗು ತಾ|| 7 ಶುಕ್ರವಾರ ಬೆಳಿಗ್ಗೆ 8-30 ಕ್ಕೆ ನಡೆಯುವುದು

At Opera
From 6-5-48
Jungle Girl
A Republic serial
in 15 thrilling Chapters
ಜಂಗಲ್ ಗರ್ಲ್
ಪ್ರತಿದಿನ 3 [illegible]
Morning Sh[illegible]
— CC[illegible]

ಬಟ್ಟೆ ಬೆಲೆ ತಹಬಂದಿ

ಅಮೇರಿಕಾದ ಪ್ರಸಿದ್ಧ ಕಲಂನಿಸ್ಟು ಶ್ರೀ ಡೂಪರ್‌ಸನ್ನರು — 'ಮುಸ್ಲಿಂ ರಾಷ್ಟ್ರಗಳು ಪ್ಯಾಲಿಸ್ಟೈನನ್ನು ನುಂಗಿದ ಮೇಲೆ ಭಾರತವನ್ನು ನುಂಗಲು ಪ್ರಯತ್ನ ಮಾಡುತ್ತಮಾಡುತ್ತವೆ. ಜಿನ್ನರ ಪಾಕಿಸ್ತಾನದ ರಹಸ್ಯವೇ ಇದು; ಅಮೆರಿಕಾದವರು ಮುಸ್ಲಿಂ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರವನ್ನು ಪರೋಕ್ಷವಾಗಿ ಒದಗಿಸಬಹುದು— ಎಂದು ಭವಿಷ್ಯ ನುಡಿದಿದ್ದಾರೆ.

ಪಂಜಾಬು ಕಾಲುವೆ ನೀರಿನ ವಿಭಜನೆಯ ಬಗ್ಗೆ ಪಾಕಿಸ್ತಾನ ಮತ್ತು ಭಾರತಗಳಿಗೆ ನಡೆಯುತ್ತಿದ್ದ ಮಾತುಕತೆ ಮುರಿದುಬಿದ್ದಿದೆ

ಕರಾಚಿ— ಸೆಕ್ಯೂರಿಟಿ ಕೌನ್ಸಿಲ್ಲಿನಿಂದ ನ್ಯಾಯದೊರೆಯದೆಂಬ, ಕಾಶ್ಮೀರದಲ್ಲಿ ನಿಷ್ಪಕ್ಷಪಾತವಾದ ಪ್ಲಬಿಸೈಟು ದೊರೆಯುವುದಿಲ್ಲವೆಂದೂ ಲಿಯಾಖತ್ ಅಲಿ ಖಾನರು ಹೇಳಿರುವರು.

ನವದೆಹಲಿ— ಗೌ || ಜ || ಮೌಂಟು ಬ್ಯಾಟನ್ನರು ತಾ| 21 ಕ್ಕೆ ನಿವೃತ್ತರಾಗುವರೆಂದೂ ನಂತರ ಗೌ || ಜ || ಪದವಿಗೆ ಶ್ರೀ ಸಿ. ರಾಜಗೋಪಾಲಾಚಾರ್ಯರು ಬರುವರೆಂದೂ ಗೊತ್ತಾಗಿದೆ

ಪ್ಯಾರಿಸ್ — ಫ್ರೆಂಚ್ ಆಕ್ರಮಿತ ಜರ್ಮನಿಗೆ ರವ್ಯಾಪತ್ರಿಕೆಗಳರ ಬಾರದಂತೆ ಪ್ರತಿಬಂಧಿಸಲಾಗಿದೆ

Woodlands ವುಡ್‌ಲ್ಯಾಂಡ್ಸ್
7-5-48 ರಿಂದ — ದಿನವಹಿ 3 ಆಟಗಳು
ಮಾಡರ್ನ್ ಥಿಯೇಟರ್ಸ್‌ರವರ ಅತ್ಯಂತ ಸುಂದರ ತಮಿಳು ಚಿತ್ರ
1000 ತಲೈವಾಂಗಿ
ಅಪೂರ್ವ ಚಿಂತಾಮಣಿ
ಭೂಮಿಕೆಯಲ್ಲಿ— ಪಿ. ಎಸ್. ಗೋವಿಂದರ್, ಎಂ. ಆರ್. ಸ್ವಾಮಿನಾಥರ್
ಆರ್. ಬಾಲಸುಬ್ರಮಣ್ಯಂ, ಕಾಳಿ ಎನ್. ರತ್ನಂ. ಟಿ ಎಸ್. ದೊರೈರಾಜ್
ವಿ. ಎನ್. ಜಾನಕಿ, ಎಸ್. ವರಲಕ್ಷ್ಮಿ, ಟಿ. ಎಸ್. ರಾಜಾಕಾಂತಂ

ಇಂದಿನ ವರ್ತಮಾನ

ನವದೆಹಲಿ ಮೆ 4— ಬಟ್ಟೆಯ ಬೆಲೆ ನಿಯಂತ್ರಣ ಏರಿರುವ ವಿಷಯದಲ್ಲಿ ಭಾರತ ಸರಕಾರ ಉಗ್ರ ಕಾರ್ಯಾಚರಣೆ ತೆಗೆದುಕೊಳ್ಳುವ ನಿರೀಕ್ಷಣೆ ಇದೆ — ಅಧಿಕ ಲಾಭವನ್ನೆಲ್ಲಾ ಸರಕಾರಕ್ಕೇ ಸೇರಿಸಿಕೊಳ್ಳಬಹುದೆಂದು ಹೇಳಲಾಗಿದೆ

ದೆಹಲಿ—ಹೈದರಾಬಾದು ಕೂಡಲೇ ಜವಾಬ್ದಾರಿ ಸರಕಾರ ಸ್ಥಾಪಿಸಬೇಕು ಮತ್ತು ರಜಕಾರರ ಪಡೆಯನ್ನು ರದ್ದುಗೊಳಿಸಬೇಕು ಎಂಬ ಭಾರತ ಸರಕಾರದ ಸೂಚನೆಗೆ ಎರಡು ವಾರ ಮಾತ್ರ ಕಾಲಾವಕಾಶವಿದೆ.

ಟೋಕಿಯೋ— ಜಪಾನಿನಲ್ಲಿ ಹೊಸ ರಾಜ್ಯಾಂಗ ವ್ಯವಸ್ಥೆ ಜಾರಿಗೆ ಬಂದುದನ್ನು ಸೂಚಿಸಲು ಒಂದು ಪುಟ್ಟ ಸಮಾರಂಭ ನಡೆಸಲಾಯಿತು

ಲಂಡನ್ ಮೆ 5 .... ಪಂಚಿತ ನೆಹರು ಹೈದರಾಬಾದಿನ ಬಗ್ಗೆ ಯುದ್ಧೋಚಿತವಾದ ಮಾತುಗಳನ್ನಾಡುತ್ತಿದ್ದಾರೆ: ಹೈದರಾಬಾದು ಸ್ವತಂತ್ರವಂಗಿರುವೆನೆಂಬ ನ್ಯಾಯುವಾದ ಜೇಡಿಕೆಯನ್ನು ಒತ್ತಾಯ ಪಡಿಸುವ ಅಧಿಕಾರವನ್ನು ಬ್ರಿಯನ್ ಉಪಯೋಗಿಸಬೇಕೆಂದಿರುವರು ಬಟ್ಲರ್‌ರು ಕಾಮನ್ಸ್ ಸಭೆಯಲ್ಲಿ

ರಾಜ್ಯಾಂಗ ಸಭಾಧಿವೇಶನ

ಬೆಂಗಳದರು ಮೆ 5 .... ಈ ಮಧ್ಯಾಹ್ನ ರಾಜ್ಯಾಂಗ ಸಭೆಯು ಶ್ರೀ ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಶಾಸನ ಸಭಾ ಭವನದಲ್ಲಿ ಪ್ರಾರಂಭವಾಯಿತು.

ಉಪಾಧ್ಯಕ್ಷ ಶ್ರೀ ಗಂಜಿ ವೀರಪ್ಪನವರು ಆಭಿನಂದಿಸಲ್ಪಟ್ಟರು.

ಹಣಕಾಸಿನ ಚರ್ಚೆ ತೆಗೆದುಕೊಳ್ಳಬೇಕೆಂದು ಕೇಳಿದರು) ಶ್ರೀ ಡಿ ವಿ ಗುಂಡಪ್ಪನವರು. ಕಾರ್ಯಕ್ರಮ ಪಟ್ಟಿಯಂತೆ ಧ್ಯೇಯೋದ್ದೇಶ ನಿರ್ಣಯ ಮೊದಲು ಬರಬೇಕೆಂದರು ಅಧ್ಯಕ್ಷರು

ನಿರ್ಣಯವನ್ನು ಶ್ರೀ ಕೆ ಸಿ ರೆಡ್ಡಿಯವರು ಮಂಡಿಸಿದರು, ಶ್ರೀ ಹೆಚ್ ಕೆ ವೀರಣ್ಣಗೌಡರು ಅನುಮೋದಿಸಿದರು: ಧರ್ಮಿಕ ತತ್ವದಿಂದ ಕೂಡಿದ ಸಕಲ ವಿಷಯಗಳೊಳಗೆವಿಂಡ ನಿರ್ಣಯವು ವಿದೆಂದು ಅನೇಕರ ಅಭಿಪ್ರಾಯ; ಈ ನಿರ್ಣಯಕ್ಕೆ 8 ತಿದ್ದುಪಡಿಗಳು ಬಂದಿವೆ

ಮೀನಕಿ

(ಮುಂದುವರಿದುದು)

ನೋಡು ರಾಜಾ ! ಈ ಉಷಃ ಕಾಂತಿಯು ದಶ ದಿಶೆಗಳನ್ನು ದಗ ದ್ಧ ನಾಯಮಾನವಾಗಿ ಬೆಳೆಸುತ್ತಿದೆ. ಈ ಕೋಗಿಲೆಗಳ ಧ್ವನಿಯಲ್ಲಿ, ಈ ನವ ವಸಂ ತ ಮಲಯ ಮಾರುತಗಳಲ್ಲಿ, ಅಬ್ಬಾ ! ನಿಮ್ಮೀಲಿತ ನೇತ್ರನಾಗಿ ಹೇಗೆ ಇರಬಲ್ಲವ ನಾಗಿರುವೆಯಯ್ಯಾ ? ಪ್ರಕೃತಿ ಸೌಂ ದರ್ಯಕ್ಕೆ ವಿಗ್ಧನಾಗದೆ, ಪ್ರ ಕೃ ತಿ ಯನ್ನು ಕಂಡು ಕಣ್ಣುಗಳನ್ನು ಮುಚ್ಚಿ ಕೊಂಡಿರುವೆ ! ಸೌಂದರ್ಯ ಪಿಪಾ ಸೆಯು ಇಷ್ಟು ಮಾತ್ರವೂ ಇ ಲ್ಲ ವೇ ನಿನ್ನಲ್ಲಿ ? ಏಳು ರಾಜಾ ಸೌಂದರ್ಯವ ನ್ನಾರಾಧಿಸು.

[ಆತನು ಮೌನ, ಆಕೆಗೆ ಕೋಪ]

ಹೌದು ಸರ್ವಸಂಗಪರಿತ್ಯಾಗಿಗೆ ಆನಂ ದವೆಂದರೇನು ? ಯಾವ ಅನುಭವವ ನ್ನೂ ಅರ್ಥಮಾಡಿಕೊಳ್ಳದೆ, ಯಾವುದ ರಲ್ಲಿಯೂ ನಂಬಿಕೆಯಿಲ್ಲದೆ ಕೊಸೆಗೆ ಆದರ್ಶಕ್ಕಾಗಿ ಒದ್ದಾಡುವ ಅಶಾಂತಶೆ ಯಲ್ಲಿ ಸರ್ವವನ್ನೂ ತ್ಯಜಿಸಿ ಸ ನ್ಯಾ ಸಿ ಗಳಾದ ನಿಮಗೆ ಆನಂದವೆಂದರೆ ಅರ್ಥ ವಾಗುತ್ತದೆಯೋ. ನಿಮ್ಮ ಪ್ರಯತ್ನ ಗಳಿಗೆ ಅರ್ಥವಿದ್ದಲ್ಲಿ .... (ಶಾಂತ ತೆಯಿಂದ) ನೋಡಿ ರಾಜಾ ಕೊಪವನ್ನು ತಡೆಯಲಾರದೆ ಎಂಥಾ ಮಾತನ್ನು ನು ಡಿದೆ. ನನ್ನ ರಾಜಸವನ್ನು ಮಟ್ಟ ಹಾಕಲಾರದೆ ಹೋದೆ. ಕ್ಷಮಿಸುವು ದಿಲ್ಲವೇ, ನನ್ನನ್ನು ಕ್ಷಮಿಸಲಾರಿರಾ ? (ಆತನ ಪಾದಗಳನ್ನು ಹಿಡಿದುಕೊಳ್ಳು ವಳು — ಸ್ವಲ್ಪ ಚಲಿಸುತ್ತಾನೆ ವಿಶ್ವಾ ಮಿತ್ರ) ಅನುಗ್ರಹಿಸುವುದಿಲ್ಲವೇ ರಾಜಾ ! ನನ್ನ ತಪ್ಪನ್ನು ಮನಃಪೂರ್ವಕ ವಾಗಿ ಮನ್ನಿಸಿರುವೆಯಾ, ಎಲ್ಲಿ ಅದ ನ್ನೇ ಒಂದು ಬಾರಿ ಬಾಯಿಂದ ನುಡಿ ಯಲಾರಿರಾ ! ನೋಡಿ ರಾಜಾ ನನ ಗಾಗಿ ಎಷ್ಟೋ ಮಂದಿ, ಎಷ್ಟೋ ಕಾ ಲದಿಂದ ಕಾದುಕೊಂಡಿದ್ದರೂ ಲಕ್ಷ್ಮಿ ಎಡದೆ ನಿಮ್ಮಲ್ಲಿಯೇ ನನ್ನ ಮನಸ್ಸನ್ನು ನೆಲೆಗೊಳಿಸಿ ಇಂದಿಗೆ ನಿಮ್ಮನ್ನು ಸೇರಿರು ವೆನು. ಆದರೆ ನೀವೇ ನನ್ನನ್ನು ಬೇಡ ವೆಂದಲ್ಲಿ ಇನ್ನು ನನಗೆ ದಿಕ್ಕು ಯಾರು. ಅವರಲ್ಲಿ ಯಾರನ್ನೂ ಏಕೆ ಒಯ್ಯಸಲಿಲ್ಲ ನಿಮ್ಮನ್ನು ಹೊಂದಬಲ್ಲೆನೆಂಬ ಧೈರ್ಯ ದಿಂದಲ್ಲವೇ ? ರಾಜಾ ಕರುಣಿಸುವುದಿ ಲ್ಲವೇ (ಆತನ ಪಾದಗಳನ್ನು ಹಿಡಿದು ಕೊಂಡು ಹೃದಯಕ್ಕೆ ಅಪ್ಪಿಕೊಳ್ಳುತ್ತಾ ಅಳುವಳು) ರಾಜಾ ಕರುಣಿಸುವುದಿ ಲ್ಲವೇ (ವಿಶ್ವಾಮಿತ್ರನು ಕಣ್ಣುಗಳನ್ನು ತೆರೆದು ಶೂನ್ಯದೃಷ್ಟಿಯಲ್ಲಿರುತ್ತಾನೆ)

[ಮಿಕ್ಕಿದ್ದು ನಾಳೆ ಪತ್ರಿಕೆಯಲ್ಲಿ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

' ಪ್ರಬೋಧ ' ಪುಟದಿಂದೊಡಗೂಡಿದ ಸೋಮವಾರ ಸಂಚಿಕೆ ವಾರ್ಷಿಕಚಂದಾ ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--13--0

Save the Cow

ಗೋ ವಧೆ ನಿಲ್ಲಲಿ

SHAKTI SUDHA

A Superb TONIC

Good Printing

L. N. Press

Sivarampet, Mysore

ವಿಟೋಫೆರಿನ್

ಟ್ರೇಡ್ ITL ಮಾರ್ಕ್

ಎ. ಬಿ. ಡಿ. ವಿಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು. ಭಟ್ಟಿ ಇಳಿಸಿದ ರಾಗಿ ಮತ್ತು ಜೇನುತುಪ್ಪ ಇವುಗಳನ್ನೊಳಗೊಂಡು ತಯಾರಿಸಲ್ಪಟ್ಟ ಟಾನಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾದುದು.

" ವಿಟೋಫೆರಿನ್ " ಖಾಯಿಲೆ ಒರದಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.

Malleswaram P. O. Bangalore

Advertise in ' Satyavadi'

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾ ರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನ ಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿ ಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ, [illegible] ಎಲ್ಲಾ ನ ತೋಲಾ, ಡಬ್ಬಿಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯು [illegible] ಕಾಗಿ ವಿನಂತಿ.

[illegible] ಸಾಲ್
ಮದರಾಸ್.

Edited, [illegible]
by M[illegible]
S[illegible]